ISSN: 0302-9832

# SHODHAK

A Journal of Historical Research

Volume: 53, Issue: 02, No: 10, May - August : 2023

Editor : Dr. Ram Pande

Mailing Address:
**SHODHAK**
B-424, Malviya Nagar, Jaipur-302017
e-mail : shodhakjournal@gmail.com

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College

INDEX


| S.No | TITLE | Page No. |
| --- | --- | --- |
| 1 | ವಸಾಹತುಕಾಲೀನ ಹೈದ್ರಾಬಾದ್ ಕರ್ನಾಟಕದಲ್ಲಿ ಕನ್ನಡದ ಅಸ್ಮಿತೆಯ ಹೋರಾಟಗಳು | 1 |
| 2 | ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ-ರ್ನಾಟಕದ ಮಹಿಳೆಯರ ಪಾತ್ರ | 5 |
| 3 | "विद्यार्थियों की शैक्षिक शिथिलता का अध्ययन" | 11 |
| 4 | BUYING BEHAVIOUR OF CONSUMERS TOWARDS GREEN PRODUCTS –AN ANALYTICAL STUDY | 16 |
| 5 | THE RISE AND FALL OF THE DALIT PANTHERS MOVEMENT: AN APPRAISAL | 22 |
| 6 | HERSTORY IN THE MAKING: KASHMIRI WOMEN'S ROLE IN THE PEOPLE'S MOVEMENTS | 29 |
| 7 | INFORMATION TECHNOLOGY,CHALLENGES IN E-BANKING STRATEGY | 36 |
| 8 | MAPPING THE GLOBAL LANDSCAPE OF THE STRUCTURE CONDUCT PERFORMANCE APPROACH: A BIBLIOMETRIC ANALYSIS | 39 |
| 9 | ANALYSIS OF CUSTOMER AWARENESS AND LEVEL OF SATISFACTION: WITH INDIA POST PAYMENTS BANK SERVICES IN REWARI DISTRICT, HARYANA | 54 |
| 10 | "SOCIO-ECONOMIC DISPARITIES IN THE WESTERN HIMALAYA: A MICRO-LEVEL STUDY OF THE UTTARKASHI DISTRICT, UTTARAKHAND (INDIA)" | 62 |
| 11 | GIRLS' EDUCATION IN THE 21ST CENTURY IN INDIA | 71 |
| 12 | OVERPOPULATION, AGEING POPULATION AND FALLING BIRTH RATES-THREE CHALLENGES OF THE WORLD POPULATION | 78 |
| 13 | LEGAL ANALYSIS OF THE RIGHTS OF THE FEMALE PRISONER UNDER THE CONSTITUTION OF INDIA | 84 |
| 14 | MIGRANT CHILDREN: SOCIAL INTEGRATION IN THE INDIAN EDUCATION SYSTEM | 90 |
| 15 | JOB SATISFACTION TOWARDS WOMEN EMPLOYEES OF IT SECTOR WITH SPECIAL REFERENCE TO COIMBATORE | 101 |
| 16 | CONSUMER PREFERENCES OF KENTUCKY FRIED CHICKEN WITH SPECIAL REFERENCE OF COIMBATORE DISTRICT | 108 |
| 17 | A STUDY ON CUSTOMER PERCEPTION AND SATISFACTION TOWARDS MOBILE MARKETING MANAGEMENT | 116 |
| 18 | A STUDY ON CUSTOMER SATISFACTION TOWARDS E-LEARNING APPLICATION WITH SPECIAL REFERENCE TO COIMBATORE CITY | 123 |


CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

Shodhak : A Journal of Historical Research
ISSN : 0302-9832
Volume: 53, Issue: 02, No: 10, May - August : 2023

# ವಸಾಹತುಕಾಲೀನ ಹೈದ್ರಾಬಾದ್ ಕರ್ನಾಟಕದಲ್ಲಿ ಕನ್ನಡದ ಅಸ್ಮಿತೆಯ ಹೋರಾಟಗಳು

**ಡಾ. ವಿಠ್ಠಲ ಕೋಳಿ** ಸಹಾಯಕ ಪ್ರಾಧ್ಯಾಪಕರು ಇತಿಹಾಸ ವಿಭಾಗ ಕೆ.ಎಲ್.ಇ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಗದಗ ಪಿನ್ ಕೋಡ್- ೫೮೨೧೦೧
ಮೇಲ್.ಐಡಿ - vithalkoli1@gmail.com

**ಡಾ.ನಿಂಗಮ್ಮ ಗದಗ** ಸಹಾಯಕ ಪ್ರಾಧ್ಯಾಪಕರು ಇತಿಹಾಸ ವಿಭಾಗ ಕೆ.ಎಲ್.ಇ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಗದಗ-೫೮೨ ೧೦೨
ಮೇಲ್ ಐಡಿ – tulsigadag@gmail.com

೧೫೬೫ರ ರಕ್ಕಸಗಿ ತಂಗಡಗಿ ಯುದ್ಧದಲ್ಲಿ ವಿಜಯನಗರದ ಅರಸರ ವಿರುದ್ಧ ವಿಜಯಿಗಳಾಗುವ ಮೂಲಕ ಬಹುಮನಿ ಷಾಹಿಗಳು ತುಂಗಭದ್ರಾ ಮತ್ತು ಕೃಷ್ಣಾ ನದಿ ತೀರ ಪ್ರದೇಶಗಳ ಮೇಲೆ ಅಧಿಪತ್ಯವನ್ನು ಸಾಧಿಸಿದರು. ಈ ಮೂಲಕ ಕನ್ನಡ ನೆಲದಲ್ಲಿ ಕನ್ನಡದ ಮೇಲೆ ಪರ್ಷಿಯನ್, ಉರ್ದು ಭಾಷೆಗಳ ಅಧಿಪತ್ಯಗಳು ನಡೆದವು. ಹಾಗೇ ೧೭೯೯ ರಲ್ಲಿ ಟಿಪ್ಪುವಿನ ಪಥನದ ಮೂಲಕ ಇಡೀ ದಕ್ಷಿಣ ಭಾರತ ಬ್ರಿಟಿಷರ ಹಾಗೂ ಅವರ ಅಧೀನ ರಾಜ್ಯಗಳ ಪಾಲಾಯಿತು. ಮತ್ತೊಮ್ಮೆ ತುಂಗಭದ್ರಾ ಮತ್ತು ಕೃಷ್ಣಾ ನದಿ ತೀರದ ಜನರ ಮೇಲೆ ಉರ್ದು ಭಾಷೆಯ ಒತ್ತಡ ಹೆಚ್ಚಾದದ್ದು ಪ್ರಮುಖ ಸಂಗತಿಯಾಗಿದೆ. ಹೈದ್ರಾಬಾದ್ ಪ್ರದೇಶದ ಕನ್ನಡಿಗರು ನಿಜಾಮನ ಆಡಳಿತದ ತೆಕ್ಕೆಯಲ್ಲಿ ಅನ್ಯ ಭಾಷೆ, ಸಂಸ್ಕೃತಿಯ ಒತ್ತಡದಲ್ಲಿದ್ದಿದ್ದು ಕನ್ನಡಿಗರ ಜಾಗೃತಿಗೆ ಕಾರಣವಾಯಿತು. ಕಾಂಗ್ರೆಸ್ ಸಂಸ್ಥೆಯ ಮೂಲಕ ಭಾರತದಲ್ಲಿ ಜರುಗುತಿದ್ದ ಸ್ವಾತಂತ್ರ್ಯ ಹೀರಾಟದ ಪ್ರಭಾವ ಹೈದ್ರಾಬಾದ್ ಕರ್ನಾಟಕದ ಮೇಲಾಯಿತು. ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧಿ ಕರೆಗೆ ಓಗೊಟ್ಟ ಯುವ ಜನತೆ ಶಾಲಾ-ಕಾಲೇಜುಗಳನ್ನು, ಸರಕಾರಿ ನೌಕರರು ಕಛೇರಿಗಳನ್ನು ತೊರೆದರು. ವಿದೇಶಿ ತತ್ವ ಸಿದ್ಧಾಂತಗಳನ್ನು ತೊರೆದು ದೇಶಿಯತೆಯನ್ನು ರೂಢಿಸಿಕೊಂಡರು. ಈ ರೀತಿಯಾಗಿ ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಕೊಂಡವರು ಒಂದೆಡೆಯಾದರೆ, ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿದ್ದುಕೊಂಡೇ ರಾಷ್ಟ್ರೀಯ ಹೋರಾಟ, ನಾಡು-ನುಡಿ ಚಟುವಟಿಕೆಗಳಲ್ಲಿ ತೊಡಗಿ ದೇಶಿಯತೆಯನ್ನು ರೂಢಿಸಿಕೊಂಡವರು ಹಲವರು., ಅಂಥವರಲ್ಲಿ ಜಯದೇವಿತಾಯಿ ಲಿಗಾಡೆ, ಭೀಮಣ್ಣಾ ಖಂಡ್ರೆ, ಪ್ರಭುರಾವ ಕಂಬಳಿವಾಲೆ, ಶಾಂತರಸರು ಮುಖ್ಯರು. ಜಯದೇತಾಯಿ ಲಿಗಾಡೆಯವರು ಕಾಂಗ್ರೆಸ್‌ನ ಸದಸ್ಯರಾಗಿ ಸೊಲ್ಲಾಪುರದಲ್ಲಿ ಗಾಂಧಿ ತತ್ವ ಪ್ರಚಾರವನ್ನು ಕೈಗೊಂಡರು. ಸ್ವಾತಂತ್ರ್ಯ ನಂತರ ರಾಜಕಾರಣಿಗಳು ಭಾಷಾವಾರು ಪ್ರಾಂತ್ರ್ಯಗಳ ರಚನೆಗಾಗಲಿ, ಗಡಿ ಬಾಗದ ಜನರ ಸಮಸ್ಯೆಗಳಿಗಾಗಲಿ ಯಾವುದೇ ಮನ್ನಣೆಯನ್ನು ನೀಡದೇ ಅಧಿಕಾರಕ್ಕಾಗಿ ಹವಣಿಸುತಿದ್ದರು. ೧೯೪೮ ರಲ್ಲಿ ಗಾಂಧಿಜೀಯವರ ಮರಣದ ನಂತರ ಕಾಂಗ್ರೆಸ್ ಮೇಲಿನ ನಂಬಿಕೆಯನ್ನು ಜನತೆ ಕಳೆದುಕೊಂಡರು. ಅಧಿಕಾರದ ಲಾಭಿಗಾಗಿ ಜನರ ಸಮಸ್ಯೆಗಳನ್ನು ಗಾಳಿಗೆ ತೂರಿದ ರಾಜಕೀಯ ವ್ಯವಸ್ಥೆಯು ರೂಪುಗೊಂಡಿತು. ಇದರಿಂದ ಅನೇಕ ಕನ್ನಡದ ಮುಖಂಡರು ಕಾಂಗ್ರೆಸ್ ಮೇಲಿನ ತಮ್ಮ ಒಲವನ್ನು ಕಳೆದುಕೊಂಡು ಜಯದೇವಿಯವರಂಥ ಮುಖಂಡರು ಕಾಂಗ್ರೆಸ್ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಜಯದೇವಿತಾಯಿ ಲಿಗಾಡೆಯವರ ಮುಂದಿನ ಹೆಜ್ಜೆ ಸೊಲ್ಲಾಪುರ ಸಹಿತ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣವಾಗಿತ್ತು. ಈ ಚಿಂತನೆಯ ಸಾಕಾರಕ್ಕೆ ಅವರು ಎಡಪಂತಿಯ ಚಿಂತನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ೧೯೫೦ ರಲ್ಲಿ ಆರ್.ವಿ ಬೀಡಪ, ಭೀಮಣ್ಣಾ ಖಂಡ್ರೆ, ಪ್ರಭುರಾವ ಕಂಬಳಿವಾಲೆ ಮೊದಲಾದವರು ಸೇರಿ 'ಪ್ರಜಾ ಸೋಶಿಯಾಲಿಸ್ಟ್' ಪಾರ್ಟಿಯನ್ನು ಸ್ಥಾಪಿಸಿದರು. ಜಯದೇವಿ ಅವರು ಅವರೊಂದಿಗೆ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡು, ಇವರ ಒಡನಾಟದೊಂದಿಗೆ ಲೋಹಿಯಾ, ಜಯಪ್ರಕಾಶ ನಾರಾಯಣ, ಶಾಂತವೇರಿ ಗೋಪಾಲಗೌಡರ ಪ್ರಭಾವಕ್ಕೂ ಒಳಗಾಗಿದ್ದರು. ಈ ಮೂಲಕ ಒಬ್ಬ ಸಮಾಜವಾದಿಯಾಗಿ ಗುರುತಿಸಿಕೊಂಡರು. ಮುಂದೆ



CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

**Shodhak** : A Journal of Historical Research
ISSN : **0302-9832**
Volume: **53**, Issue: **02**, No: **10**, May - August : **2023**

ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ (ಅ.ಕ.ರಾ.ನಿ)ಉಪಾಧ್ಯಕ್ಷೆಯಾಗಿಯೂ ಕೆಲಸ ನಿರ್ವಹಿಸಿದರು.

೧೯೫೨ ರಲ್ಲಿ ಹೈದ್ರಾಬಾದ್ ರಾಜ್ಯದ ಮುಖ್ಯಮಂತ್ರಿ ಬಿ. ರಾಮಕಿಶನ್‌ರನ್ನು ಕರೆಸಿ ಸನ್ಮಾನಿಸಲಾಯಿತು. ಜಯಪ್ರಕಾಶ ನಾರಾಯಣ, ರಾಮಮನೋಹರ್ ಲೋಹಿಯಾ ಅವರ ಪ್ರಭಾವಕ್ಕೆ ಒಳಗಾಗಿದ್ದ ಪ್ರಭುರಾವ ಅವರು ೧೯೫೨ ರಲ್ಲಿ ಸಮಾಜವಾದಿ ಪಕ್ಷ ಸೇರಿಕೊಂಡರು. ಜಿಲ್ಲೆಯಾದ್ಯಂತ ಸಂಚರಿಸಿ ಸಮಾಜವಾದಿ ಪಕ್ಷವನ್ನು ಬೆಳೆಸಲು ಶ್ರಮಿಸಿದರು.೧ ಅವರು ಹೈದ್ರಾಬಾದ್ ಪ್ರಾಂತ್ಯಕ್ಕೆ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದರು. ಕಂಬಳಿವಾಲೆ ಅವರು ೧೯೫೨ ರಲ್ಲಿ ನಡೆದ ಚುನಾವಣೆಯಲ್ಲಿ ಸೋತ ನಂತರ ಕಿಸಾನ್ ಮೋರ್ಚಾ, ಭೂದಾನ ಚಳವಳಿ, ಜನಸಂಘಟನೆಯತ್ತ ಮನಸ್ಸು ಮಾಡಿದರು. ಜಯದೇವಿ ಅವರು ಗಡಿ ನಾಡಿನಲ್ಲಿದ್ದುಕೊಂಡು ಕಂಬಳಿಬಾಬಾ ಅವರ ಎಲ್ಲ ಚಟುವಟಿಕೆಯಲ್ಲಿ ಸಕ್ರೀಯರಾಗಿರುತ್ತಿದ್ದರು. ಜಯದೇವಿ ಅವರು ತಮ್ಮ ಬರೆಹದಲ್ಲಿ ಪ್ರಸ್ತಾಪಿಸುತ್ತ, 'ಸಮತಾವಾದದ ಪದ್ಧತಿಯ ಸಮಾಜ ರಚನೆಯನ್ನು ಕುರಿತು ತನ್ನ ಧ್ಯೇಯವನ್ನಾಗಿ ಇಟ್ಟುಕೊಂಡ ಇಂದಿನ ನಮ್ಮ ರಾಷ್ಟ್ರಕ್ಕೆ ಸ್ಫೂರ್ತಿಯ ಸೆಲೆಯಾಗಿದೆ ನಮ್ಮ ಕರ್ನಾಟಕ. ಅಂಥ ಪಾಠವನ್ನು ಓರ್ವ ಕನ್ನಡತಿ ಕಲಿಸಿದ್ದಾಳೆ. ದಿನಕ್ಕೆ ಬೇಕಾಗುವ ದರಕ್ಕಿಂತಲೂ ಹೆಚ್ಚಿನ ಅಕ್ಕಿಯನ್ನು ಬಡವರಲ್ಲಿ ಹಂಚುತ್ತಾಳೆ ಆಯ್ದಕ್ಕಿ ಲಕ್ಕಮ್ಮ. ಭಾರತಕ್ಕೆ ಆದರ್ಶಪ್ರಾಯಳಾದ ಕನ್ನಡತಿ. ನಾವರಿಯದ ಅದೆಷ್ಟೋ ಕನ್ನಡತಿಯರಿಗೆ ನಮ್ಮ ಪ್ರಣಾಮಗಳು.'೨ ಎಂದು ಸಮತವಾದದ ಬಗ್ಗೆ ಹೇಳುತ್ತಾರೆ.

ಕಾಂಗ್ರೆಸ್ಸಿನ ಧುರೀಣ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಗಾಂಧಿ ಅವರ ಮರಣದ ನಂತರ ಕಾಂಗ್ರೆಸ್ಸಿನಲ್ಲಿ ಸ್ವಾರ್ಥ ರಾಜಕಾರಣ ನಡೆದಿತ್ತು. ಪಕ್ಷದಲ್ಲಿಯ ಕೆಟ್ಟ ಆಲೋಚನೆಗಳು, ಕೆಲಸಗಳನ್ನು ಕಂಡು ಜಯದೇವಿ ಅವರು ಕಾಂಗ್ರೆಸ್ ಮೇಲಿನ ನಂಬಿಕೆಯನ್ನು ಕಳೆದುಕೊಂಡು ಅದರಿಂದ ಹೊರಬಂದರು. ಇದೇ ಸಂದರ್ಭದಲ್ಲಿ ಹೈದ್ರಾಬಾದ್ ಮುಖ್ಯಮಂತ್ರಿ ಬಿ. ರಾಮಕಿಶನ್ ಅವರು ಕಿಸಾನ್ ಶಿಕ್ಷಣ ಪರಿಷತ್ತಿನಲ್ಲಿ ಜಯದೇವಿ ಅವರನ್ನು ಕಂಡು, ಅವರ ಭಾಷಣ ಕೇಳಿ ಕಾಂಗ್ರೆಸ್ಸಿನ ಸದಸ್ಯೆ ಎನ್ನುವುದನ್ನು ತಿಳಿದಿದ್ದರು. ಅದೇ ಕಾಲಕ್ಕೆ ಜಯದೇವಿ ಅವರು 'ಕಾಂಗ್ರೆಸ್ ಪಕ್ಷದಲ್ಲಿ ಗಾಂಧಿ ತತ್ತ್ವ ವಿರೋಧಿ ಧೋರಣೆ ಹೆಚ್ಚುತ್ತ ನಡೆದಿದೆ ಇಂಥ ಪಕ್ಷದಲ್ಲಿದ್ದು ಜನತೆಯ ಸೇವೆ ಮಾಡಲು ನನ್ನ ಅಂತರಾತ್ಮ ಒಪ್ಪುತ್ತಿಲ್ಲವೆಂದು' ೩ ಕಾಂಗ್ರೆಸ್‌ಗೆ ರಾಜಿನಾಮೆ ಕೊಟ್ಟರು. ಈ ವಿಚಾರ ತಿಳಿದು ಬಿ. ರಾಮಕಿಶನ್ ರಾವ್ ಅವರು ತಮ್ಮ ಪರ ಚುನಾವಣಾ ಪ್ರಚಾರ ಮಾಡಲು ಕೇಳಿದರು. ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ಪ್ರಸಿದ್ಧರಾಗಿದ್ದ ಜಯದೇವಿ ಅವರನ್ನು ಚುನಾವಣೆ ಅಭ್ಯರ್ಥಿಗಳು ಪಕ್ಷ ಪ್ರಚಾರಕ್ಕೆ ಆಹ್ವಾನಿಸಿದರು. ಲೋಕಸಭೆಯ ಅಭ್ಯರ್ಥಿಯಾಗಿದ್ದ ಶಿವಮೂರ್ತಿಸ್ವಾಮಿ ಅಳವಂಡಿ, ವೀರಭದ್ರಪ್ಪ ಶಿರೂರ, ಮಹಾದೇವಮ್ಮ ಪಾಟೀಲ್, ಶಂಕರ ಥೇಣಿ ಇವರೆಲ್ಲ ಅ.ಕ.ರಾ.ನಿ ಪಕ್ಷದಲ್ಲಿದ್ದು, ಪ್ರಚಾರಕ್ಕೆ ಜಯದೇವಿ ಅವರನ್ನು ಕರೆದರು. ಜನತೆಯು ಜಯದೇವಿ ಅವರನ್ನು ಪ್ರೀತಿಯಿಂದ ಗೌರವಿಸಿದರು. ಅವರ ಭಾಷಣಕ್ಕೆ ಆಕರ್ಷಿತರಾದರು. ಹೋದ ಹೋದಲ್ಲಿ ಕೇವಲ ಪಕ್ಷ ಪ್ರಚಾರವಷ್ಟೇ ಮಾಡದೇ ಕನ್ನಡ ಭಾಷಾ ಪ್ರಚಾರ, ಅಸ್ಪೃಶ್ಯತೆ ನಿವಾರಣೆ ಹಾಗೂ ಅಸ್ಪೃಶ್ಯರ ಉದ್ಧಾರಕ್ಕಾಗಿ ಪ್ರಚಾರ ಕೈಗೊಂಡರು. 'ಒಬ್ಬರು ಗೆದ್ದರೆ ಇನ್ನೊಬ್ಬರು ಸೋಲುತ್ತಾರೆ. ನಾನು ಚುನಾವಣೆಗೆ ನಿಂತಿಲ್ಲ. ನಿಮ್ಮ ಸ್ಥಿತಿಗತಿಗಳನ್ನು ನೋಡಲು ಬಂದಿದ್ದೇನೆ. ಒಳ್ಳೆಯವರಿಗೆ ಮತ ಕೊಡಿರಿ.'೪ ಎಂದು ಜನತೆಯಲ್ಲಿ ಮತಗಳ ಮಹತ್ವವನ್ನು ಒತ್ತಿ ಹೇಳುತ್ತಿದ್ದರು. ಅವರ ಪ್ರಭಾವದಿಂದಲೇ ಕಾಂಗ್ರೆಸ್ಸೇತರ ಪಕ್ಷ ಗೆದ್ದು ಬಂದು ಕಾಂಗ್ರೆಸ್ ಸೋತಿತು. ಅವರು ಪ್ರಚಾರ ಕೈಗೊಂಡಿದ್ದು ಅದೇ ಮೊದಲು ಅದೇ ಕೊನೆ. ಚುನಾವಣೆಯಲ್ಲಿ ಜಾತಿ ಆಧಾರಿತ ಮತ ಕೇಳುವುದನ್ನು ವಿರೋಧಿಸುತ್ತಿದ್ದರು. 'ಮುಂಬರುವ ಚುನಾವಣೆಗಳಲ್ಲಿ ಬ್ರಾಹ್ಮಣರಿಗೆ ಮತ ಕೊಡಬೇಡಿರಿ ಎಂದು ಹೊಣೆಗಾರ ಕಾಂಗ್ರೆಸ್ಸನ್ನೊಳಗೊAಡ ಅನೇಕರು ಜೋರಿನಿಂದ ಪ್ರಚಾರ ಕೈಗೊಂಡಿದ್ದರು. ಇಂಥ ದ್ವೇಷ ಭಾವನೆಗಳನ್ನು ಜನರಲ್ಲಿ ಹೆಚ್ಚಿಸುವುದು ಜಾತ್ಯಾತೀತ ರಾಷ್ಟ್ರ ರಚನೆಗೆ ಎಂದೆAದಿಗೂ ಫಲಕಾರಿ ಅಲ್ಲ. ಇದು ಪ್ರಜಾಸತ್ತಾತ್ಮಕ ಸಮಾಜದ ಬೆಳವಣಿಗೆಗೆ ಆತಂಕವನ್ನೊಡ್ಡುವುದು. ಹೀಗೆ ಪ್ರಚಾರ ಮಾಡುವವರು ಬ್ರಾಹ್ಮಣರ ಶಾಪದ ಬದಲು ಜನತೆಯ ಮೇಲೆ

COORDINATOR
IQAC
K.L.E.S' Arts & Commerce College
GADAG



PRINCIPAL
K.L.E. Society's
Arts & Commerce College
GADAG-BETGERI-582101

ISSN: 03...
: A Journal of Historical Research
N : 0302-9832
Volume: 53, Issue: 02, No: 10, May - August : 2023

ಬ್ರಾಹ್ಮಣೇತರರ ಶಾಪವನ್ನು ಹೇರುತ್ತಿರುವರೆಂದರೂ ತಪ್ಪಾಗಲಾರದು.'[೫] ಎಂದು ಹೇಳುತ್ತ ಬ್ರಾಹ್ಮಣೇತರ ಚಳವಳಿಯ ಪ್ರಭಾವವನ್ನು ತಮ್ಮ ಮಾತಿನ ವೈಖರಿಯಲ್ಲಿ ಹೇಳುತ್ತಾರೆ.

ಏಕೀಕರಣಕ್ಕಾಗಿ ಆಗ್ರಹ ಹೆಚ್ಚಾದಾಗ ೧೯೫೨ ಡಿಸೆಂಬರ್ ೨೯ ರಂದು ಕೇಂದ್ರ ಸರ್ಕಾರ ರಾಜ್ಯ ಪುನರ್ವಿಂಗಡನಾ ಆಯೋಗವನ್ನು ನೇಮಿಸಿತು. ಫಜಲ್ ಅಲಿ ಅಧ್ಯಕ್ಷತೆಯಲ್ಲಿ ಎಸ್.ಎನ್.ಕುಂಜ್ರು ಮತ್ತು ಕೆ.ಎಂ.ಪಣಿಕ್ಕರ್ ಅವರು ಸದಸ್ಯರಾಗಿದ್ದರು. ಆ ಸಮಿತಿ ಎಲ್ಲಾ ಕಡೆ ಸಂಚರಿಸಿ ಜನರ ಅಭಿಪ್ರಾಯವನ್ನು ಸಂಗ್ರಹಿಸತೊಡಗಿತು. ಆಗ ಮಹಾರಾಷ್ಟ್ರÄಯರು ತಮ್ಮ ತಂತ್ರಗಾರಿಕೆಯನ್ನು ಮಾಡತೊಡಗಿದರು. ಕರ್ನಾಟಕದ ಪರ ಮಾತನಾಡುವವರನ್ನು ತಟಸ್ಥರನ್ನಾಗಿಸಲು ಮಹಾರಾಷ್ಟ್ರ ಸರಕಾರವು ತಮ್ಮ ಮಂತ್ರಿ ಮಂಡಲದಲ್ಲಿ ಸ್ಥಾನ ಕೊಡುವ ಯೋಜನೆಯನ್ನು ಹಾಕಿತು. ಆಗ ಎಂ.ಪಿ.ಸಿ.ಸಿ ಅಧ್ಯಕ್ಷರಾಗಿದ್ದ ಹೀರೆ ಅವರು ಚುನಾವಣೆ ನಿಲ್ಲಲು ಜಯದೇವಿ ಅವರನ್ನು ಕೇಳಿದರು. ಜಯದೇವಿ ಅವರು 'ರಾಜ್ಯಸಭೆಯ ಅಧಿವೇಶನದಲ್ಲಿ ಸೊಲ್ಲಾಪುರವು ಕರ್ನಾಟಕದ್ದಾಗಲೇಬೇಕೆಂದು ಹೇಳಲು ತಮ್ಮ ಅನುಮತಿ ಇದೆಯೇ? ಇದ್ದರೇ ನಾನು ಬರಲು ಸಿದ್ಧ' [೬] ಎಂದು ಹೇಳಿದರು. ಈ ರೀತಿಯಾಗಿ ಜಯದೇವಿ ಅವರ ಮರ್ಜಿ ಕಾಯ್ದುಕೊಳ್ಳಲು ಜಯದೇವಿ ಅವರಿಗೆ ಬೇಕಾದ ವ್ಯಕ್ತಿಗೆ ಟಿಕೇಟ್ ಕೊಡುವುದಾಗಿ ಕೇಳಿದರು. ಆಗ ಅವರು ಅಕ್ಕಲಕೋಟೆಯ ಮಹಾರಾಣಿ ನಿರ್ಮಲರಾಜೆ ಬೋಸ್ಲೆ ಅವರ ಹೆಸರನ್ನು ಸೂಚಿಸಿದರು. ನಿರ್ಮಲಾರಾಜೆ ಅವರು ಜೀವನದಲ್ಲಿ ಕಷ್ಟ ನೋವುಗಳಿಂದ ಅರಮನೆಯಲ್ಲೇ ಇದ್ದರು. ಆಗ ಅವರನ್ನು ಸಮಾಜಮುಖಿಯಾಗಿಸಲು ಪ್ರೋತ್ಸಾಹಿಸಿ ರಾಜಕೀಯಕ್ಕೆ ಕರೆತಂದರು. ನಂತರ ಅವರು ವಿಧಾನಸಭೆಗೆ ಆಯ್ಕೆಯಾಗಿ ಜಯದೇವಿ ಅವರ ಬೆಂಬಲದಿAದ ಅಧಿಕಾರಕ್ಕೆ ಬಂದ ಅವರಿಂದಲೇ ಕರ್ನಾಟಕಕ್ಕೆ ಆಘಾತವಾಗಿತ್ತು. ಸೊಲ್ಲಾಪುರ, ಅಕ್ಕಲಕೋಟೆ ಮಹಾರಾಷ್ಟ್ರ ಸೇರಲು ಅವರೇ ಕಾರಣರಾದರು.

ಕಾಂಗ್ರೆಸ್ ಮೇಲಿನ ನಂಬಿಕೆ ಕಳೆದುಕೊಂಡಿದ್ದ ಜಯದೇವಿ ಅವರು ಕಾಂಗ್ರೆಸ್ಸೇತರ ಪಕ್ಷಗಳಿಗೆ ಬೆಂಬಲ ನೀಡುತ್ತಿದ್ದರು. ೧೯-೪-೧೯೫೩ ರಂದು ಹುಬ್ಬಳ್ಳಿಯ ಪುರಸಭಾ ಭವನದಲ್ಲಿ ನಡೆದ ಕೆ.ಪಿ.ಸಿ.ಸಿ ಕಾರ್ಯಕಾರಿ ಸಭೆಯ ಕಾಂಗ್ರೆಸ್‌ನ ಎಲ್ಲ ಮುಖಂಡರು ಪಾಲ್ಗೊಳ್ಳುತ್ತಿದ್ದು ಅಂದೇ ಗಲಬೆಯು ನಡೆಯಿತು. ಇದೇ ಹುಬ್ಬಳ್ಳಿ ಗಲಬೆ ಎಂದು ಹೆಸರಾಯಿತು. ಆಂಧ್ರದ ಹೋರಾಟಗಾರರಾದ ಪೊಟ್ಟಿ ಶ್ರೀರಾಮುಲು ಅವರ ಪ್ರೇರಣೆಯಿಂದ ಕರ್ನಾಟಕ ಏಕೀಕರಣ ಆಗಲೇಬೇಕೆಂದು ಶಂಕರಗೌಡ ಪಾಟೀಲರು ಅಮರಣ ಉಪವಾಸ ಕುಳಿತಿದ್ದರು. ಈ ಉಪವಾಸವನ್ನು ನಿಲ್ಲಿಸಿ, ಏಕೀಕರಣದ ಆಶಯವನ್ನು ಇಡೇರಿಸುವ ಕನಸು ಕಂಡಿದ್ದ ಜನತೆಗೆ ಅದು ನಿರಾಶೆಯಾಗಿತ್ತು. ಈ ಸುದ್ದಿ ಹಳ್ಳಿ-ಹಳ್ಳಿಗೂ ಮುಟ್ಟಿತ್ತು. ಎಲ್ಲೆಡೆ ಏಕೀಕರಣದ ಕುರಿತು ಚರ್ಚೆಗಳು ನಡೆದಿದ್ದವು. ಈ ಸಮಸ್ಯೆ ಕೇವಲ ರಾಜಕೀಯ ಸಮಸ್ಯೆಯಾಗದೆ ಜನಸಾಮಾನ್ಯರ ಸಮಸ್ಯೆಯಾಗಿ ತಲೆದೋರಿತ್ತು. ಜನರೇ ಬಗೆಹರಿಸಿಕೊಳ್ಳಲು ಮುಂದಾದರು. ಏಕೀಕರಣ ವಿಷಯವಾಗಿ ಕಾಂಗ್ರೆಸ್ಸಿನವರ ವಿಳಂಬ ನೀತಿಯಿಂದ ಜನತೆ ಬೇಸತ್ತರು. ಕಾಂಗ್ರೆಸ್ಸಿನ ನಾಯಕರು ಶಂಕರಗೌಡ ಪಾಟೀಲರ ಅಮರಣ ಉಪವಾಸ ೨೩ನೇ ದಿನಕ್ಕೆ ಕಾಲಿಟ್ಟರೂ ಅದನ್ನು ತಡೆದು ಅಖಂಡ ಕರ್ನಾಟಕ ರಚನೆ ಕುರಿತು ಖಚಿತ ಭರವಸೆ ನೀಡಲಿಲ್ಲ. ಆಗ ಕಾಂಗ್ರೆಸ್ಸೇತರರು ಜನಸಾಮಾನ್ಯರೊಂದಿಗೆ ಸೇರಿ ಕಾಂಗ್ರೆಸ್ಸಿನ ರಾಜಕೀಯ ಮುಖಂಡರಲ್ಲಿ ಒತ್ತಾಯ ಪೂರ್ವಕವಾಗಿ ರಾಜೀನಾಮೆ ಪಡೆಯಲು ಮುಂದಾದರು. ಇದೇ ಗದ್ದಲದಲ್ಲಿ ದಿನಾಂಕ: ೧೯, ೨೦ ರಂದು ಕೆ.ಪಿ.ಸಿ.ಸಿ ಸಭೆಯು ಕರ್ನಾಟಕ ಏಕೀಕರಣಕ್ಕೆ ಸಂಬAಧಿಸಿದAತೆ ಚರ್ಚಿಸಿ ನಿರ್ಣಯ ಸ್ವೀಕರಿಸಿತು. ಆದರೆ ಕರ್ನಾಟಕ ರಾಜ್ಯ ರಚನೆಯ ಕನಸು ನನಸಾಗದೆ ಆಂಧ್ರ ರಾಜ್ಯ ರಚನೆಗೆ ಒಪ್ಪಿಗೆ ಸೂಚಿಸಿತು. ಈ ಎಲ್ಲಾ ಘಟನೆಗಳು ಜನತೆಯಲ್ಲಿ ನೋವನ್ನುಂಟು ಮಾಡಿ ಕಾಂಗ್ರೆಸ್ ಮೇಲಿದ್ದ ಭರವಸೆಯನ್ನು ಕಳೆದುಕೊಂಡರು. ಈ ಕಾರಣಕ್ಕಾಗಿಯೇ ಕಾಂಗ್ರೆಸ್ಸೇತರ ಪಕ್ಷಗಳು ಸರ್ವಪಕ್ಷೀಯ ಏಕೀಕರಣ ಪರಿಷತ್ತನ್ನು ನಡೆಸಿತು.

ಆ ಪಕ್ಷಗಳಲ್ಲಿ ಕಮ್ಯುನಿಸ್ಟರು, ಸೋಶಿಯಲಿಸ್ಟರೇ ಅಧಿಕವಾಗಿದ್ದರು. ಇವರು ಕರ್ನಾಟಕ ರಾಜ್ಯ ನಿರ್ಮಾಣವನ್ನೇ ಮುಖ್ಯ ಗುರಿಯಾಗಿಸಿಕೊಂಡು ಚಳವಳಿ ನಡೆಸಲು ಮುಂದಾದರು. ಇದರ ಫಲವಾಗಿಯೇ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು (ಅ.ಕ.ರಾ.ನಿ) ಸ್ಥಾಪನೆಯಾಯಿತು.



CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

**Shodhak** : A Journal of Historical Research
ISSN : **0302-9832**
Volume: **53,** Issue: **02,** No: **10,** May - August : **2023**

ಇದರ ಮೊದಲ ಕಾರ್ಯದರ್ಶಿಗಳಾಗಿ ಮಂಗಳೂರು ಜಿಲ್ಲೆಯವರಾದ ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರಲ್ಲೊಬ್ಬರಾದ ಎಸ್.ವಿ.ಘಾಟೆ ಅವರನ್ನು ನೇಮಿಸಲಾಯಿತು.೭ ಪಕ್ಷಾತೀತ ಸಂಸ್ಥೆಯಾದ ಇದರಲ್ಲಿ ಕೆ.ಆರ್. ಕಾರಂತರು, ಅಳವಂಡಿ ಶಿವಮೂರ್ತಿ ಸ್ವಾಮಿಗಳು, ಬಿ.ವಿ.ಕಕ್ಕಿಲಾಯ್, ಕೆ.ಎನ್.ಉಪಾಧ್ಯಾಯ, ಮಹಾದೇವ ಮುರುಗೋಡು, ಇಟಗಿ ವೇದಮೂರ್ತಿ, ಚಿನ್ಮಯಸ್ವಾಮಿ ಓಂಕಾರ ಮಠ, ಶಾಂತಿನಾಥ ಇಂಗಳೆ, ಚೆನ್ನಪ್ಪ ವಾಲಿ, ತಲ್ಲೂರು ರಾಯನಗೌಡ, ಬಿ.ಎನ್ ಮುನವಳ್ಳಿ, ಎ.ಕೆ.ಮುಧೋಳ್, ಎಸ್.ಗೋಪಾಲಗೌಡರು ಮೊದಲಾದವರು ಅ.ಕ.ರಾ.ನಿಯ ಮುಂಚೂಣಿ ಸದಸ್ಯರು. ಜಯದೇವಿತಾಯಿ ಲಿಗಾಡೆ, ಕೋ.ಚೆನ್ನಬಸಪ್ಪ, ಬಸವರಾಜ ಕಟ್ಟೀಮನಿ ಅವರು ಅ.ಕ.ರಾ.ನಿಯ ಗುರಿ ಸಾಧನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಅಖಂಡ ಕರ್ನಾಟಕ ರಾಜ್ಯ ನಿರ್ಮಾಣದ ಗುರಿಯನ್ನು ಹೊಂದಿದ್ದ ಜಯದೇವಿ ಅವರಿಗೆ ಯಾವ ಪಕ್ಷವಾಗಲಿ, ವ್ಯಕ್ತಿಯಾಗಲಿ ಮುಖ್ಯವಾಗಿರಲಿಲ್ಲ. ಅವರಿಗೆ ಆ ಗುರಿ ಸಾಧನೆಯೇ ಮುಖ್ಯವಾಗಿತ್ತು. ಅ.ಕ.ರಾ.ನಿ ಪರಿಷತ್ತಿನೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದಿದ್ದ ಇವರು ಅ.ಕ.ರಾ.ನಿ ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿದ್ದರು.೮ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನವರು ಆಗಸ್ಟ ೧೫ ರಂದು ಕಪ್ಪು ಧ್ವಜ ಹಾರಿಸುವ ನಿರ್ಣಯ ಕೈಗೊಂಡರು. ಜಯದೇವಿ ಅವರು ಅದನ್ನು ಖಂಡಿಸಿ ಆ ಸಂಘಟನೆಗೂ ರಾಜೀನಾಮೆ ಕೊಟ್ಟರು. ಈ ರೀತಿಯಾಗಿ ನಾಡು-ನುಡಿ-ರಾಷ್ಟ್ರದ ಹಿತಕ್ಕಾಗಿ ಆಲೋಚಿಸುತ್ತಿದ್ದ ಇವರು ಪಕ್ಷಕ್ಕಿಂತ ತತ್ವ ಮುಖ್ಯವೆಂದು ನಂಬಿ ಬಾಳಿದರು.

ಫಜಲ್ ಅಲಿ ಆಯೋಗದ ಸಮಿತಿಯು ತನ್ನ ಅಧ್ಯಯನವನ್ನು ಪೂರ್ಣಗೊಳಿಸಿ ೧೯೫೫ರ ಸೆಪ್ಟಂಬರ್ ೩೦ ರಂದು ತನ್ನ ವರದಿಯನ್ನು ಮಂಡಿಸಿತು. ಇದರ ತಿದ್ದುಪಡಿ ಅನ್ವಯ ೧೯೫೬ ನವಂಬರ್ ೧ ರಂದು ವಿಶಾಲ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದಿತು. ಇದರಂತೆ ಕರ್ನಾಟಕದವರಿಗೆ ಅನ್ಯಾಯವಾಗಿ ಕರ್ನಾಟಕದ ಸೊಲ್ಲಾಪುರ, ಅಕ್ಕಲಕೋಟೆ, ಜತ್ತ, ಗಡಹಿಂಗ್ಲಜ ಈ ಥರದ ಅನೇಕ ಗಡಿ ಭಾಗಗಳು ಕರ್ನಾಟಕದಿಂದ ಕೈಬಿಟ್ಟು ಮಹಾರಾಷ್ಟ್ರ ಸೇರಿಕೊಂಡವು. ಸೊಲ್ಲಾಪುರ, ಅಕ್ಕಲಕೋಟೆಗಳು ಮಹಾರಾಷ್ಟ್ರ ಸೇರಲು ನಿರ್ಮಲರಾಜೆ ಅವರು ಕಾರಣರಾಗಿದ್ದರು. ಗಡಿಭಾಗದ ಕನ್ನಡ ಪ್ರದೇಶಗಳು ಮಹಾರಾಷ್ಟ್ರ ಸೇರಲು ತಮ್ಮವರೇ ಕಾರಣವಾದದ್ದು ಜಯದೇವಿ ಅವರಿಗೆ ತುಂಬಾ ನೋವುಂಟು ಮಾಡಿತು. ಈ ಕಾರಣಕ್ಕಾಗಿ ಸೊಲ್ಲಾಪುರ ತೊರೆದು ಬಸವ ಕಲ್ಯಾಣಕ್ಕೆ ಬಂದು ನೆಲೆಸಿ ತಮ್ಮ ಕೊನೆಗಾಲವನ್ನು ಕಳೆದರು.

## ಟಿಪ್ಪಣಿಗಳು

1. ಮೈಸೂರು ರಾಜ್ಯ., (1956), ಜಯದೇವಿತಾಯಿ ಲಿಗಾಡೆ (ಲೇ), ಕನ್ನಡನಾಡಿನಲ್ಲಿ ಮಹಿಳೆಯರ ಪಾತ್ರ (ಲೇ), ಪು.ಸಂ-216
2. ಸರೋಜಿನಿ ಚಾವಲಾರ., (1992), ಜಯದೇವಿತಾಯಿ ಲಿಗಾಡೆ. ಪು.ಸಂ-155
3. ಅದೇ., ಪು.ಸಂ-15
4. ನಿAಗಮ್ಮ., (2021), ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಜಯದೇವಿತಾಯಿ ಲಿಗಾಡೆಯವರ ಪಾತ್ರ. ಪು.ಸಂ-77
5. ನಾರಾಯಣಮ್ಮ ಬಿ., (2012), ಕರ್ನಾಟಕ ಏಕೀಕರಣ ರೂವಾರಿ ಜಯದೇವಿತಾಯಿ ಲಿಗಾಡೆ. ಪು.ಸಂ-22
6. ಗೋಪಾಲರಾವ್ ಎಚ್ ಎಸ್., (2017), ಕರ್ನಾಟಕ ಏಕೀಕರಣ ಇತಿಹಾಸ. ಪು.ಸಂ-198-199
7. ಅದೇ., ಪು.ಸಂ-214
8. ಹAಪ ನಾಗರಾಜಯ್ಯ (ಸಂ)., (1985), ಕನ್ನಡ ನುಡಿ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಜಯದೇವಿತಾಯಿ ಲಿಗಾಡೆ, 48ನೇ ಕನ್ನಡ ಸಾಹಿತ್ಯ ಸಮ್ಮೇಳನ. ಪು.ಸಂ-07

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101